ಊರು. ಇಲ್ಲಿ ಶ್ಯಾಮರಾವ್ ದೇಶಪಾಂಡೆಯವರದು ದೊಡ್ಡ ಹೆಸರು. ಇನ್ನೂರು ಎಕರೆ ಹೊಲ, ಮನೆ ಇರುವ ಗಟ್ಟಿ ಕುಳ. ಕಬ್ಬು, ಭತ್ತ. ತರಕಾರಿ... ಏನೆಲ್ಲ ಬೆಳೆಯುತ್ತಿದ್ದೆವು. ಮನೆಯಲ್ಲಿ ಎಂಟೆತ್ತಿನ ಕಮತ... ಆಳು, ಕಾಳುಗಳಿಂದ ತುಂಬಿದ ಮನೆ. ಅವರಿಗಾಗಿ ರಾಶಿ ರೊಟ್ಟಿಗಳನ್ನು ಮಂಚಿಯ ಅವ್ವ ಬಸವ್ವ ಹಿತ್ತಿಲಲ್ಲಿ ಒಲೆ ಹೂಡಿ ಬಡಿಯುವುದಿತ್ತು. ನಿತ್ಯ ನಾಲ್ಕಾರು ಜನ ಅತಿಥಿಗಳು ಇದ್ದೇ ಇರುತ್ತಿದ್ದರು. ಅವ್ವ ನಡುಮನೆಯ ಗೂಟಕ್ಕೆ ತೂಗು ಹಾಕಿದ ಚೀಲಗಳನ್ನು ಎಣಿಸಿ ಅಷ್ಟು ಜನರ ಅಡಿಗೆ ಮಾಡುವುದಿತ್ತು. ಎಲ್ಲ ಮೇಲುಸ್ತುವಾರಿಯನ್ನೂ ಅವಳೇ ನೋಡಿಕೊಳ್ಳುತ್ತಿದ್ದಳು. ಅಪ್ಪ ಬೇಸಾಯವಲ್ಲದೇ ನೆರೆಹೊರೆಯವರ ವ್ಯಾಜ್ಯವನ್ನು ಪರಿಹರಿಸುವದರಲ್ಲಿ ಮಧ್ಯಸ್ಥಿಕೆ ವಹಿಸುತ್ತಿದ್ದ. ಅಪ್ಪನ ಅಧ್ಯಕ್ಷತೆಯಲ್ಲಿ ಹೊಸದಾಗಿ ರಾಯರ ಮಠವನ್ನೂ ನಿರ್ಮಿಸಲಾಗುತ್ತಿತ್ತು. ಹೀಗೆ, ದರ್ಪದ ವ್ಯಕ್ತಿತ್ವ ಮೈಗೂಡಿಸಿಕೊಂಡಿದ್ದ ಅಪ್ಪ ಮಗಳ ಮದುವೆ ಏನೂ ದೊಡ್ಡ ವಿಷಯವಲ್ಲ ಎಂದುಕೊಂಡದ್ದು ನಿಜವೇ. ಆದರೆ, ವಿಧಿ ಹಾಗಿರಲಿಲ್ಲ ಬಿಡಿ. ಅದಾಗಲೇ ನನ್ನ ಹಣೆಯಲ್ಲಿ ತನ್ನದೇ ಚಿತ್ತಾರ ಬಿಡಿಸಿತ್ತು.

ಮಂಚಿ ನನ್ನ ಆತ್ಮೀಯ ಗೆಳತಿ. ಬಸವ್ವನಿಗೆ ಮದುವೆಯಾಗಿ ಅನೇಕ ವರ್ಷಗಳವರೆಗೆ ಮಕ್ಕಳಾಗಿರಲಿಲ್ಲ. ಮಂಚಾಲಮ್ಮನಿಗೆ ಹರಕೆ ಹೊತ್ತು ಹುಟ್ಟಿದ ಮಗುವಿಗೆ 'ಮಂಚಿ' ಎಂದೇ ಕರೆದಳು. ಆದರೆ, ಅವಳ ಜಾತಿ ಮತ್ತು ಅಂತಸ್ತಿನ ಕಾರಣದಿಂದ ಮನೆಯಲ್ಲಿರುವಾಗ ದೂರದೂರವೇ ಇರುತ್ತಿದ್ದ ನಾವು ಶಾಲೆಗೆ ಅಥವಾ ಆಟಕ್ಕೆ ಹೋದಾಗ ಒಟ್ಟಿಗೆ ಆಡುತ್ತಿದ್ದೆವು. ಆದರೂ ಮನೆಯಲ್ಲಿ ಎಲ್ಲರ, ಅದರಲ್ಲೂ ಹೆಚ್ಚಾಗಿ ಸೋದರತ್ತೆ ರತ್ನಕ್ಕನ ಕಂಗಳು ನನ್ನನ್ನು ಹಿಂಬಾಲಿಸುತ್ತಿದ್ದುದರ ಅರಿವು ನನಗಿತ್ತು. ಅವಳ ಸಾವಿನ ಅನಂತರ ಕೊಂಚ ಸಲೀಸಾಗಿತ್ತು. ಊರಲ್ಲಿದ್ದುದೇ ಒಂದು ಸರ್ಕಾರಿ ಶಾಲೆ. ದೊಡ್ಡಣ್ಣ ನಾರಾಯಣ, ಚಿಕ್ಕಣ್ಣ ಕೇಶವ ಎಲ್ಲರ ಓದು ಅಲ್ಲೇ ಸಾಗಿತ್ತು. ಹಿರಿಯ ಅಕ್ಕಂದಿರಿಬ್ಬರೂ ಏಳನೇ ಇಯತ್ತೆಗೆ ಬಿಟ್ಟುಬಿಟ್ಟದ್ದಂತೆ. ಅವರಿಗೆ ಮದುವೆಯೂ ಬೇಗನೇ ಆಗಿ ನಮ್ಮ ನಡುವಿನ ಅಂತರ ದೊಡ್ಡದಾಗಿತ್ತು. ಅವರ ಮದುವೆಯಲ್ಲಿ ನಾನು ಏಳೆಂಟು ವರ್ಷದ ಹುಡುಗಿ. ಲಂಗ ತೊಟ್ಟು ಓಡಾಡುತ್ತಿದ್ದ ನೆನಪು. ಎರಡು ಮಕ್ಕಳು ಹೋದರೂ ಉಳಿದವರೈದು ಮಂದಿ. ಅಕ್ಕಂದಿರು ಲೆಕ್ಕಕ್ಕಿದ್ದರೂ ನಂಟು ಅಷ್ಟಕ್ಕಷ್ಟೇ. ಎರಡೋ ಮೂರೋ ಬಾಣಂತನಗಳ ಬಳಿಕ ತಮ್ಮ ತಮ್ಮ ಸಂಸಾರ ಚಕ್ರಗಳಲ್ಲೇ ಸುತ್ತುತ್ತಿದ್ದವರು ಬರುವುದೇ ಅಪರೂಪ. ಬಂದರೂ ನನಗೆ ಅಕ್ಕಂದಿರೆನ್ನುವ ಆತ್ಮೀಯಭಾವ, ಸಲಿಗೆ ಬರುವುದೇ ಇಲ್ಲ.

ಎಲ್ಲರಿಗೂ ಕೊನೆಯ ಮುದ್ದಿನ ತಂಗಿ ರುಕ್ಮಿಣಿ ನಾನು. ಏನು ಮುದ್ದೋ... ಲದ್ದಿ ಬಿದ್ದು ಹೋಯ್ತು. ಒಮ್ಮೊಮ್ಮೆ ಕೊನೆಯವರಾಗಿ ಹುಟ್ಟಬಾರದು ಎನಿಸಿದ್ದಿದೆ. ದೊಡ್ಡವರ ಕಾರ್ಯಗಳಲ್ಲಿ ಅಪ್ಪ, ಅಮ್ಮಂದಿರಿಗೆ ಬಲ, ಉತ್ಸಾಹವಿರುತ್ತದೆ. ಕೊನೆಯದಕ್ಕೆ ಸೋತು... ಸೊರಗಿ ಸೊಪ್ಪಾಗಿರುತ್ತಾರೆ. ಇದೊಂದು ಜವಾಬ್ದಾರಿ ಮುಗಿದರೆ ಸಾಕೆಂಬ ಭಾವನೆ. ಅದರಲ್ಲೂ ಅಣ್ಣ, ಅತ್ತಿಗೆಯರ ರಾಜ್ಯಭಾರ ಆರಂಭವಾಗಿರುತ್ತದೆ. ಇವರ ಅಧಿಕಾರವೂ ನಡೆಯಲ್ಲ. ಪುಣ್ಯಕ್ಕೆ ನಮ್ಮ ಮನೆಯಲ್ಲಿ ದೊಡ್ಡಣ್ಣ ಒಳ್ಳೆಯವನೇ. ಅಪ್ಪನ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದ. ಹೊಲ, ಕಮತದ ಉಸ್ತುವಾರಿಯನ್ನು ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದ. ಅಪ್ಪ ಜಗುಲಿಯಲ್ಲಿ ದಿಂಬಿಗೆ ಒರಗಿ ಕುಳಿತುಕೊಂಡು ದೇಖರೇಖಿ ಮಾಡುವುದಷ್ಟೇ. ದೊಡ್ಡ ಅತ್ತಿಗೆಯಾಗಿ ಬಂದ ರಮಾ ವೈನಿ ಕೂಡ ಒಳ್ಳೆಯವರೇ. ಮೃದುಭಾಷಿ ಸಹೃದಯಿಯಾಗಿ ನನಗೆ ಅಕ್ಕಂದಿರು ದೂರವಿದ್ದ ಕೊರತೆ ನೀಗಿಸಿದವರು. ಅವರು ಚೊಚ್ಚಲು ಗಂಡುಮಗುವಿನ ತಾಯಿಯಾದಾಗ ಮನೆಯಲ್ಲಿ ಸಂಭ್ರಮವೋ ಸಂಭ್ರಮ. ಇಬ್ಬರು ಗಂಡುಮಕ್ಕಳು... ಒಬ್ಬಳು ಮಗಳು ಅಂಗಳದ ತುಂಬೆಲ್ಲಾ ಆಡಿ ಓಡಾಡಿದಾಗ ಮಲ್ಲಿಗೆ ಹೂ ಬಿರಿದಂತಾಗಿದ್ದು ನಿಜವೇ.

ಚಿಕ್ಕಣ್ಣ ಕೇಶವ ಇನ್ನೂ ಒಳ್ಳೆಯವ. ದೊಡ್ಡಣ್ಣನೊಂದಿಗೆ ಕೈ ಜೋಡಿಸುತ್ತಿದ್ದ. ಹೇಳಿದ ಕೆಲಸ